ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕಾಲುವೆ, ಕೆರೆ, ಜಲಾಶಯ, ಅಣೆಕಟ್ಟು, ಬಾಂದಾರ, ಕುಂಟೆ, ಮಡಗು ಹಾಗೂ ಇತ್ಯಾದಿಗಳಿಂದ ಕೈಗಾರಿಕೆಗಳು ಬಳಸುವ ನೀರಿನ ದರವನ್ನು ಪರಿಷ್ಕರಣೆ ಮಾಡುವ ಬಗ್ಗೆ.

ಓದಲಾಗಿದೆ :- ಸರ್ಕಾರದ ಆದೇಶ ಸಂಖ್ಯೆ:ಜಸಂಇ 272 ಕೆಬಿಎನ್ 2017, ದಿನಾಂಕ:28/05/2018.

ಪ್ರಸ್ತಾವನೆ:-

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಜಲ ಸಂಪನ್ಮೂಲ ಇಲಾಖೆ ಮತ್ತು ಅದರ ವ್ಯಾಪ್ತಿಯಲ್ಲಿನ ನಿಗಮಗಳಡಿ ಬರುವ ನೀರಿನ ಮೂಲಗಳಿಂದ ಕೈಗಾರಿಕೆದಾರರು ಬಳಸುವ ನೀರಿನ ದರವನ್ನು ಕರ್ನಾಟಕ ನೀರಾವರಿ (ನೀರಿನ ದರ ವಿಧಿಸುವಿಕೆ) ತಿದ್ದುಪಡಿ ನಿಯಮಗಳು, 2018ರ ಅನುಮೋದನೆಯನ್ನು ಕಾಯ್ದಿರಿಸಿ ಈ ಕೆಳಗಿನಂತೆ ಪರಿಷ್ಕರಿಸಿ ಆದೇಶಿಸಿದೆ.

- ಕಾಲುವೆಗಳು, ಕೆರೆಗಳು, ಜಲಾಶಯ ಇತ್ಯಾದಿಗಳಿಂದ ನೀರನ್ನು ಒದಗಿಸಿದ್ದರೆ ಪ್ರತಿ ಎಂ.ಸಿ.ಎಫ್.ಟಿ ನೀರಿಗೆ ರೂ.3.00 ಲಕ್ಷ ರಾಜಧನ;
- ನೈಸರ್ಗಿಕ ಜಲ ಮಾರ್ಗಗಳು, ನದಿ, ಹಳ್ಳಗಳಿಂದ ನೀರನ್ನು ಒದಗಿಸಿದ್ದರೆ ಪ್ರತಿ ಎಂ.ಸಿ.ಎಫ್.ಟಿ ನೀರಿಗೆ ರೂ.1.50 ಲಕ್ಷ ರಾಜಧನ;

ಸದರಿ ಪಾವತಿಯನ್ನು ಸರ್ಕಾರದ ರಾಜಸ್ವ (Revenue) ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ಸೂಚಿಸಿದೆ.

ಜಲ ಸಂಪನ್ಮೂಲ ಇಲಾಖೆಯಡಿಯ ನಿಗಮದ ವ್ಯಾಪ್ತಿಯ ನದಿ ಅಥವಾ ಇತರೆ ಮೂಲಗಳಿಂದ ನೀರನ್ನು ಎತ್ತಿ ಬಳಕೆ ಮಾಡುತ್ತಿರುವ ಕೈಗಾರಿಕೆದಾರರು ದಿನಾಂಕ:28/5/2018ರ ಸರ್ಕಾರದ ಆದೇಶದಲ್ಲಿ ನಿಗದಿಪಡಿಸಿರುವ ನೀರಿನ ದರವು ಅಧಿಕವಾಗಿದ್ದು, ಅದನ್ನು ಪರಿಷ್ಕರಿಸುವಂತೆ ಹಲವಾರು ಮನವಿಗಳನ್ನು ಸಲ್ಲಿಸಿರುತ್ತಾರೆ.

ದಿನಾಂಕ:13/11/2018ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಉಪಯೋಗಿಸುವ ನೀರಿನ ದರದ ಪರಿಷ್ಕರಣೆ ಕುರಿತಂತೆ ಸಭೆ ಜರುಗಿದ್ದು, ಸದರಿ ಸಭೆಯಲ್ಲಿ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು, ಕೈಗಾರಿಕೆದಾರರ ಜೊತೆ ಸಮಾಲೋಚನೆ ನಡೆಸಿ, ಅವರ ಅಭಿಪ್ರಾಯಗಳನ್ನು ಪಡೆದು, ಕೈಗಾರಿಕಾ ಉದ್ದೇಶಕ್ಕಾಗಿ ಉಪಯೋಗಿಸುವ ನೀರಿನ ದರದ ಪರಿಷ್ಕರಣೆ ಕುರಿತಂತೆ ಅಭಿಪ್ರಾಯವನ್ನು ಜಲ ಸಂಪನ್ಮೂಲ ಇಲಾಖೆಗೆ ಸಲ್ಲಿಸಲು ಮತ್ತು ಜಲ ಸಂಪನ್ಮೂಲ ಇಲಾಖೆಯು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಅಭಿಪ್ರಾಯ ಪಡೆದ ನಂತರ, ಕೈಗಾರಿಕಾ ಉದ್ದೇಶಕ್ಕಾಗಿ ಉಪಯೋಗಿಸುವ ನೀರಿನ ದರದ ಪರಿಷ್ಕರಣೆ ಕುರಿತಂತೆ ಮುಂದಿನ ಕ್ರಮ ಕೈಗೊಳ್ಳತಕ್ಕದ್ದು ಎಂದು ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ.

ಅದರಂತೆ, ದಿನಾಂಕ:15/12/2018 ಮತ್ತು 05/03/2019ರಂದು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಅಧ್ಯಕ್ಷತೆಯಲ್ಲಿ ಕೈಗಾರಿಕೆದಾರರ ಜೊತೆ ಕೈಗಾರಿಕಾ ಉದ್ದೇಶಕ್ಕಾಗಿ ಬಳಸುವ ನೀರಿನ ದರದ ಕುರಿತು ಚರ್ಚಿಸಲು ಜರುಗಿದ ಸಭೆಗಳಲ್ಲಿ ಅಂತಿಮವಾಗಿ ಈ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ.

(i) ಕೈಗಾರಿಕಾ ಉದ್ದೇಶಕ್ಕಾಗಿ ಉಪಯೋಗಿಸುವ ನೀರಿನ ದರವನ್ನು WRD Core Committee Sub Group ಸಲ್ಲಿಸಿರುವ ವರದಿಯಂತೆ ಈ ಕೆಳಕಂಡ ಪರಿಷ್ಕರಣೆ ಮಾಡಲು ಜಲ ಸಂಪನ್ಮೂಲ ಇಲಾಖೆಗೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಅಭಿಪ್ರಾಯವನ್ನು ಸಲ್ಲಿಸುವುದು.

| Sl. No. | Details | Suggestions from WRD Core Committee sub Group |
|---|---|---|
| 1 | If water is drawn from natural water ways, rivers or streams for industrial use. | Rs.50,000/- per MCFT |

| | | |
|---|---|---|
| 2 | If water is drawn from Canal, Tank, Reservoir, Anicut and Bandhara, Pond, Kunta, Madagu, Talaparige belonging to Government or Nigam for industrial use. | Rs.1,00,000 per MCFT |

(ii) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಅಭಿಪ್ರಾಯವನ್ನು ಜಲ ಸಂಪನ್ಮೂಲ ಇಲಾಖೆಗೆ ಸಲ್ಲಿಸುವ ಮುನ್ನ ಸನ್ಮಾನ್ಯ ಮುಖ್ಯಮಂತ್ರಿಯವರ ಅನುಮೋದನೆ ಪಡೆಯುವುದು.

ಅದರಂತೆ, ಸದರಿ ತೀರ್ಮಾನಕ್ಕೆ ದಿನಾಂಕ:29.03.2019ರಂದು ಸನ್ಮಾನ್ಯ ಮುಖ್ಯಮಂತ್ರಿ ಯವರ ಅನುಮೋದನೆಯನ್ನು ಪಡೆಯಲಾಗಿದೆ.

ಅಂತಿಮವಾಗಿ ದಿನಾಂಕ:14/06/2019ರಂದು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರ ಸಮ್ಮುಖದಲ್ಲಿ ಜರುಗಿದ ಸಭೆಯಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಉಪಯೋಗಿಸುವ ನೀರಿನ ದರವನ್ನು ಜಲ ಸಂಪನ್ಮೂಲ ಇಲಾಖೆಯ Core Committee ಸಲ್ಲಿಸಿರುವ ವರದಿಯಂತೆ ಕೈಗಾರಿಕಾ ಉದ್ದೇಶಕ್ಕಾಗಿ ಉಪಯೋಗಿಸುವ ನೀರಿನ ದರವನ್ನು ಪರಿಷ್ಕರಣೆ ಮಾಡಲು ಮತ್ತು ಈ ಸಂಬಂಧ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಸಿಐ 149ಎಸ್‌ಪಿಐ 2018/ಪಿ–3 ದಿನಾಂಕ:02.04.2019ರಲ್ಲಿ ಶಿಫಾರಸ್ಸು ಮಾಡಿರುವುದನ್ನು ಪರಿಗಣಿಸಲು ನಿರ್ಧರಿಸಿತು.

ಅದರಂತೆ, ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 272 ಕೆಬಿಎನ್ 2017, ಬೆಂಗಳೂರು, ದಿನಾಂಕ:29/11/2019.**

ಜಲ ಸಂಪನ್ಮೂಲ ಇಲಾಖೆ ಮತ್ತು ಅದರ ವ್ಯಾಪ್ತಿಯಲ್ಲಿನ ನಿಗಮಗಳಡಿ ಬರುವ ನೀರಿನ ಮೂಲಗಳಿಂದ ಕೈಗಾರಿಕೆದಾರರು ಬಳಸುವ ನೀರಿನ ದರವನ್ನು ಕರ್ನಾಟಕ ನೀರಾವರಿ (ನೀರಿನ ಕರ ವಿಧಿಸುವಿಕೆ) ತಿದ್ದುಪಡಿ ನಿಯಮಗಳು, 2002ಕ್ಕೆ ತಿದ್ದುಪಡಿ ಮಾಡುವ ಕರ್ನಾಟಕ ನೀರಾವರಿ (ನೀರಿನ ಕರ ವಿಧಿಸುವಿಕೆ) ತಿದ್ದುಪಡಿ ನಿಯಮಗಳು, 2019ಕ್ಕೆ ಅನುಮೋದನೆಯನ್ನು ಕಾಯ್ದಿರಿಸಿ, ದಿನಾಂಕ:28.05.2018ರಿಂದ ಅನ್ವಯವಾಗುವಂತೆ ಈ ಕೆಳಗಿನಂತೆ ಪರಿಷ್ಕರಿಸಿ ಆದೇಶಿಸಿದೆ.

| | |
|---|---|
| ಕಾಲುವೆಗಳು, ಕೆರೆಗಳು, ಜಲಾಶಯ ಇತ್ಯಾದಿಗಳಿಂದ ನೀರನ್ನು ಒದಗಿಸಿದ್ದರೆ; | ಪ್ರತಿ ಎಂ.ಸಿ.ಎಫ್.ಟಿ. ನೀರಿಗೆ ರೂ.2,00,000/–ಗಳ ರಾಜಧನ. |
| ನೈಸರ್ಗಿಕ ಜಲಮಾರ್ಗಗಳು, ನದಿ, ಹಳ್ಳಗಳಿಂದ ನೀರನ್ನು ಒದಗಿಸಿದ್ದರೆ; | ಪ್ರತಿ ಎಂ.ಸಿ.ಎಫ್.ಟಿ. ನೀರಿಗೆ ರೂ.1,00,000/–ಗಳ ರಾಜಧನ. |

ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 404 ಆಕೋ–1/2019, ದಿನಾಂಕ:05/09/2019 ಮತ್ತು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ದಿನಾಂಕ:19/09/2019ರಂದು ನೀಡಿರುವ ಸಹಮತಿಯೊಂದಿಗೆ ಈ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
29/11/19

(ಬಿ. ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ–5)
ಜಲ ಸಂಪನ್ಮೂಲ ಇಲಾಖೆ

( ಬಿ. ಹರಿನಾರಾಯಣ )
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ–5)
ಜಲ ಸಂಪನ್ಮೂಲ ಇಲಾಖೆ
ಕೊಠಡಿ ಸಂಖ್ಯೆ 316, 3ನೇ ಮಹಡಿ
ವಿಕಾಸಸೌಧ, ಬೆಂಗಳೂರು – 560 001

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಸರ್ಕಾರಿ ಮುದ್ರಣಾಲಯ, ಮೈಸೂರು ರಸ್ತೆ, ಬೆಂಗಳೂರು ಇವರಿಗೆ ಕಳುಹಿಸಿಕೊಡುತ್ತಾ, ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ, ಪ್ರಕಟಿಸಿದ 100 ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಿದೆ.

ಪ್ರತಿಯನ್ನು:

1. ಮಹಾಲೇಖಪಾಲರು (ಎ&ಇ)/(ಇ&ಆರ್‌ಎಸ್‌ಎ)/(ಜಿ&ಎಸ್‌ಎಸ್‌ಎ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲ ಸಂಪನನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
13. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
14. ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು.
15. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
16. ಹೆಚ್ಚುವರಿ ಕಾರ್ಯದರ್ಶಿಗಳು. ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
17. ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
18. ಮುಖ್ಯ ಇಂಜಿನಿಯರ್, (ಅಂರಾಜ) ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
19. ನಿರ್ದೇಶಕರು, ಜಿಯೋಮ್ಯಾಟಿಕ್ಸ್, ಆನಂದರಾವ್ ವೃತ್ತ, ಬೆಂಗಳೂರು.
20. ಸರ್ಕಾರದ ಉಪ ಕಾರ್ಯದರ್ಶಿಗಳು (ಸಚಿವ ಸಂಪುಟ) ವಿಧಾನ ಸೌಧ, ಬೆಂಗಳೂರು (ಪ್ರಕರಣ ಸಂಖ್ಯೆ: ಸಿ–672/2019ರಂತೆ ಮಾಹಿತಿಗಾಗಿ)
21. ಸರ್ಕಾರದ ಉಪ ಕಾರ್ಯದರ್ಶಿಗಳು, (ಕೃಭಾಜನಿ)/(ಸೇವೆಗಳು) ಜಲ ಸಂಪನ್ಮೂಲ ಇಲಾಖೆ.
22. ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ–1)/(ತಾಂತ್ರಿಕ–2)/(ತಾಂತ್ರಿಕ–3)/(ತಾಂತ್ರಿಕ–4)/(ಕಾಡಾ), ಜ.ಸಂ.ಇ.
23. ತಾಂತ್ರಿಕ ಸಹಾಯಕರು, (ತಾಂತ್ರಿಕ–6)/(ತಾಂತ್ರಿಕ–7) ಜ.ಸಂ.ಇ, ವಿಕಾಸ ಸೌಧ, ಬೆಂಗಳೂರು
24. ಶಾಖಾ ರಕ್ಷಕ ಕಡತ/ ಹೆಚ್ಚಿನ ಪ್ರತಿಗಳು.